**ದಿನಾಂಕ 05.12.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು 4 ನೇ ತರಗತಿಯವರೆಗೂ ವ್ಯಾಸಾಂಗ ಮಾಡಿದ್ದೇನೆ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ಅಂದಾಜು ನನಗೆ ಈಗ 50-55 ವರ್ಷ ವಯಸ್ಸಾಗಿರಬಹುದು. ನಾನು ತಾವರೆಕೆರೆ ಸರ್ಕಾರಿ ಶಾಲೆಯಲ್ಲಿ ವ್ಯಾಸಾಂಗ ಮಾಡಿದ್ದೇನೆ. ನಾನು ತಾವರೆಕೆರೆ ಶಾಲೆಯಲ್ಲಿ ವ್ಯಾಸಾಂಗ ಮಾಡಿರುವ ಬಗ್ಗೆ ದಾಖಲಾತಿ ನನ್ನ ಬಳಿ ಇಲ್ಲ. ನಾನು ಎಷ್ಟನೇ ಸಾಲಿನಲ್ಲಿ ವ್ಯಾಸಾಂಗ ಮಾಡಿದ್ದೇನೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಟಿ.ಹನುಮಂತಪ್ಪನವರು ನನಗೆ ಸುಮಾರು 10-15 ವರ್ಷಗಳಿಂದಲೂ ತಿಳಿದಿದ್ದಾರೆ. ಅಂದಿನಿಂದಲೂ ನಾನು ಮತ್ತು ಟಿ.ಹನುಮಂತಪ್ಪನವರು ಸ್ನೇಹಿತರು ಎಂದರೆ ಸರಿ. ಸಾಕ್ಷಿ ಮುಂದುವರೆದು ಆತ ನನ್ನ ಸಂಬಂಧಿಕನೂ ಹೌದು ಎಂದು ನುಡಿಯುತ್ತಾರೆ.
2. 2 ನೇ ವಾದಿ ನನಗಿಂತಲೂ 10 ವರ್ಷ ದೊಡ್ಡವರಿರಬಹುದು. ನಾನು ಓದಿದ ಶಾಲೆ ಮತ್ತು ಟಿ.ಹನುಮಂತಪ್ಪನವರು ಓದಿರುವ ಶಾಲೆ ಒಂದೇ ಇರಬಹುದು ನನಗೆ ಗೊತ್ತಿಲ್ಲ. ನನಗೆ ಇಬ್ಬರು ಮಕ್ಕಳು. ಅವರೆಲ್ಲರೂ ವಿದ್ಯಾಭ್ಯಾಸ ಮಾಡಿದ್ದಾರೆ. ಶಾಲೆಗೆ ಸೇರಿಸುವ ಮುನ್ನ ಅವರ ಜನ್ಮದಿನಾಂಕ ಮತ್ತು ತಂದೆ ತಾಯಿಯ ಹೆಸರನ್ನು ನಮೂದು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಶಾಲಾ ದಾಖಲಾತಿಯಲ್ಲೂ ಸಹ ನನ್ನ ತಂದೆ ತಾಯಿ ಮತ್ತು ಜನ್ಮದಿನಾಂಕದ ಮಾಹಿತಿ ಇದೆ ಎಂದರೆ ಸರಿ. 2016 ವರೆಗೂ ನಾನು ನನ್ನ ಅಣ್ಣ ಜನಾರ್ಧನ ರವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಹನುಮಂತಪ್ಪನವರ ಜೊತೆಯಲ್ಲೂ ಸಹ ನಾನು ವ್ಯಾಪಾರವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ.
3. ಸತ್ಯಲಕ್ಷ್ಮಿಯವರ ಮಗ ವೆಂಕಟೇಷಪ್ಪನವರೂ ಸಹ 2 ನೇ ವಾದಿಯ ಜೊತೆ ಗ್ರಾನೈಟ್ ಫ್ಯಾಕ್ಟರಿಯನ್ನು ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2000 ನೇ ಸಾಲಿನ ಹಿಂದೆ ಟಿ.ಹನುಮಂತಪ್ಪನವರ ಎಲ್ಲಾ ದಾಖಲಾತಿಗಳಲ್ಲಿ ಅವರ ತಂದೆ ತಿಮ್ಮಾಭೋವಿ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರ ತಂದೆಯ ಹೆಸರು ಪ್ರಸನ್ನಕುಮಾರ್ ಎಂದು ನುಡಿಯುತ್ತಾರೆ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ನನ್ನ ತಂದೆ ಹಾಗೂ 2 ನೇ ವಾದಿಯ ತಂದೆ ಪ್ರಸನ್ನಕುಮಾರ್ ರವರು ದಾಯಾದಿಗಳು ಆಗಿದ್ದರು ಎಂದು

ನುಡಿಯುತ್ತಾರೆ. ನನ್ನ ತಂದೆ ಹಾಗೂ 2 ನೇ ವಾದಿಯ ತಂದೆ ಪ್ರಸನ್ನಕುಮಾರ್ ರವರು ದಾಯಾದಿಗಳು ಎಂದು ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿ.ಡಿ. 1 ರಲ್ಲಿ ಛಾಯಾ ಚಿತ್ರದಲ್ಲಿ ಕಾಣುತ್ತಿರುವವರು ವಾದಿ ಹನುಮಕ್ಕ ಎಂದರೆ ಸರಿ. ನಿಡಿ.1 ರಲ್ಲಿ ಹನುಮಕ್ಕನ ಗಂಡನ ಹೆಸರು ತಿಮ್ಮಾಭೋವಿ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ದಾಖಲಾತಿಯು 2000 ನೇ ಸಾಲಿನ ಮುಂಚೆಯೇ ಆದಂತಹ ದಾಖಲಾತಿ ಎಂದರೆ ಸಾಕ್ಷಿಯು ಅದು 1994 ನೇ ಇಸವಿಯ ದಾಖಲಾತಿ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಾನು ಮತ್ತು ಸತ್ಯಲಕ್ಷ್ಮಿಯವರ ಮರ ವೆಂಕಟೇಶ್ ರವರು ವಾದಿಗಳ ಜೊತೆ ಶಾಮೀಲಾಗಿ ಮತ್ತು ತಾವರೆಕೆರೆಯ ಕೆಲವು ಗ್ರಾಮಸ್ಥರ ಮುಖಾಂತರ ಶಾಮೀಲಾಗಿ 2000 ನಂತರದ ದಾಖಲಾತಿಗಳನ್ನೆಲ್ಲಾ 1 ನೇ ವಾದಿಯ ಗಂಡ ಪ್ರಸನ್ನಕುಮಾರ್ ಎಂದು ಮತ್ತು 2 ನೇ ವಾದಿಯ ತಂದೆ ಪ್ರಸನ್ನಕುಮಾರ್ ಎಂದು ತಿದ್ದುಪಡಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

5. ಹನುಮಕ್ಕ ಮತ್ತು ಹನುಮಂತಪ್ಪನವರಿಗೆ ಸರ್ಕಾರದಿಂದ ಮಂಜೂರಾದ ತಾವರೆಕೆರೆ ಗ್ರಾಮದಲ್ಲಿ ಒಂದು ಮನೆ ಇದ್ದು, ಸದರಿಯವರು ಅದರಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಮಂಜೂರಾದ ದಾಖಲಾತಿಗಳಲ್ಲಿ ಟಿ.ಹನುಮಂತಪ್ಪ ತಂದೆ ತಿಮ್ಮಾಭೋವಿ ಎಂದು ಇದೆ ಎಂದರೆ ಸರಿಯಲ್ಲ, ಸದರಿ ಮಂಜೂರಾದ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಪ್ರಸನ್ನಕುಮಾರ್ ರವರಿಗೆ ಶಿವನಗೆರೆಯ ಗಂಗಾಧರಯ್ಯನ ಮಗಳು ಕೃಷ್ಣವೇಣಿ ಎನ್ನುವವರನ್ನು ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕೃಷ್ಣವೇಣಿ-ಪ್ರಸನ್ನಕುಮಾರ್ ರವರ ಮಕ್ಕಳೇ 1 ರಿಂದ 3 ನೇ ಪ್ರತಿವಾದಿಗಳು ಎಂದರೆ ಸರಿ. ಮದುವೆಯಾದ ಕಾಲದಲ್ಲಿ ಪ್ರಸನ್ನಕುಮಾರ್ ರವರು ಅವರ ಸ್ವಯಾರ್ಜಿತವಾಗಿ 4 ಜಮೀನುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಅದಕ್ಕೂ ಮೊದಲು ಪ್ರಸನ್ನಕುಮಾರ್ ರವರಿಗೆ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಮದುವೆಗೂ ಮೊದಲೂ ಸಹ ಆಸ್ತಿಗಳು ಇದ್ದವು. ಸದರಿ ಆಸ್ತಿಗಳು ಹೇಗೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ.

6. ಪ್ರಸನ್ನಕುಮಾರ್ ರವರ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಗಳು ಬೇರೆ ಬೇರೆ ವ್ಯಾಪಾರ ಮಾಡಿಕೊಂಡು ದುಡಿಮೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನಗೆ ಯಾವುದೇ ಸ್ವತ್ತು ತಾವರೆಕೆರೆಯಲ್ಲಿ ಇಲ್ಲ. ನನಗೆ ಯಾವುದೇ ಸ್ವತ್ತು ಇಲ್ಲದೇ ಇರುವ ಕಾರಣ ನಾನು 2 ನೇ ವಾದಿಯ ಜೊತೆ ಸೇರಿ ವ್ಯವಹಾರವನ್ನು ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಯವರು ನನ್ನನ್ನು ಮತ್ತು ಸತ್ಯಲಕ್ಷ್ಮಿ ರವರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಹನುಮಂತಪ್ಪನವರು ನನ್ನನ್ನು ಸಾಕ್ಷಿ ಹೇಳುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ, ನಾನು ಸತ್ಯಾಂಶವನ್ನು ಹೇಳಲು ಬಂದಿದ್ದೇನೆ. ನಾನು ಪ್ರತಿಬಾರಿ 2 ನೇ ವಾದಿಯ ಕಾರಿನಲ್ಲಿಯೇ ಓಡಾಡುತ್ತೇನೆ ಎಂದರೆ ಸರಿಯಲ್ಲ, ಹತ್ತಿ ಎಲ್ಲಾದರೂ ಹೋಗುವಲ್ಲಿ ಕಾರಿನಲ್ಲಿ ಬಿಡುತ್ತಾರೆ ಎಂದು ನುಡಿಯುತ್ತಾರೆ.

7. ಪ್ರಸನ್ನಕುಮಾರ್ ರವರ ಮಕ್ಕಳು ಸಾಕಷ್ಟು ದಿನಗಳು ಕಷ್ಟಪಟ್ಟು ವ್ಯಾಪಾರ ಮಾಡಿಕೊಂಡು ಚೆನ್ನಾಗಿದ್ದಾರೆ, ಆದರೆ ಅವರಿಗೂ ನಮಗೂ ಮಾತುಕತೆಯಲ್ಲಿ ಅಷ್ಟಕ್ಕೆ ಅಷ್ಟೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನಾನು ನೋಡಿದ್ದೇನೆ ಎಂದು ಹೇಳಿದ್ದು, ದಾವಾ ಸ್ವತ್ತುಗಳು ಎಷ್ಟು ಸವತ್ತುಗಳು ಮತ್ತು ಅವುಗಳ ವಿಸ್ತೀರ್ಣ ಮತ್ತು ಚಕ್ಕು ಬಂದಿ ನನಗೆ ಗೊತ್ತಿಲ್ಲ. 2 ನೇ ವಾದಿಯು ಪ್ರಸನ್ನಕುಮಾರ್ ರವರ ಮಗ ಮತ್ತು 1 ನೇ ವಾದಿಯು ಪ್ರಸನ್ನಕುಮಾರ್ ರವರ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಕ್ಕನವರು ಪ್ರಸನ್ನಕುಮಾರ್ ರವರನ್ನು ಮದುವೆಯಾಗಿದ್ದರು ಎಂದು ಹೇಳಲು ನಾನು ಯಾವುದೇ ದಾಖಲಾತಿಯನ್ನು ನೋಡಿಲ್ಲ.

8. 2 ನೇ ವಾದಿ ಹನುಮಂತಪ್ಪನವರು ಪ್ರಸನ್ನಕುಮಾರ್ ರವರ ಮಗ ಆಗಿದ್ದರು ಎಂದು ಹೇಳಲು 2000 ನೇ ಸಾಲಿನ ಹಿಂದೆ ಯಾವುದೇ ದಾಖಲಾತಿಯನ್ನು ನಾನು ನೋಡಿಲ್ಲ. 2000 ನೇ ಸಾಲಿನ ಹಿಂದೆ 2 ನೇ ವಾದಿಯ ಹೆಸರು ಟಿ.ಹನುಮಂತಪ್ಪ ಎಂದರೆ ಸಾಕ್ಷಿಯು ಅವರ ಇನಿಷಿಯಲ್ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ನಾನು ನೋಡಿಲ್ಲ. 1 ನೇ ವಾದಿ ಪ್ರಸನ್ನಕುಮಾರ್ ರವರ ಹೆಂಡತಿಯೂ ಅಲ್ಲ, 2 ನೇ ವಾದಿ ಪ್ರಸನ್ನಕುಮಾರ್ ರವರ ಮಗನೂ ಅಲ್ಲ ಎಂದರೆ

ಸರಿಯಲ್ಲ. ಕೃಷ್ಣವೇಣಿ 2 ನೇ ಹೆಂಡತಿ ಅಲ್ಲ, ಆಕೆ ಪ್ರಸನ್ನಕುಮಾರ್ ರವರ ಒಬ್ಬಳೇ ಹೆಂಡತಿ ಎಂದರೆ ಸರಿಯಲ್ಲ.

9. ದೊಡ್ಡಬಸಯ್ಯ ಎನ್ನುವವರ ಮನೆಯಲ್ಲಿ ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರು ಬಾಡಿಗೆಗೆ ಇದ್ದರು ಎನ್ನುವ ಬಗ್ಗೆ ನಾನು ದಾಖಲಾತಿ ನೋಡಿಲ್ಲ, ಆದರೆ ಅವರು ಹೋಗಿ ಬರುವುದನ್ನು ನಾನು ನೋಡುತ್ತಿದ್ದೆನು. ಪ್ರಸನ್ನಕುಮಾರ್ ರವರು ಹನುಮಕ್ಕನ ಜೊತೆ ಗಣೇಶನ ದೇವಸ್ಥಾನದ ಬಳಿ ವ್ಯಾಪಾರವನ್ನು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ರಿಂದ 3 ನೇ ಪ್ರತಿವಾದಿಗಳು ಮತ್ತು ಅವರ ತಂದೆ ಪ್ರಸನ್ನಕುಮಾರ್ ರವರಿಗೆ ಸೇರಿದ್ದರೂ ಸಹ ಅವರ ಆಸ್ತಿಯನ್ನು ಕಬಳಿಸುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**